ಸಾಧ್ಯವಿತ್ತೇ? ಅವಳನ್ನು ಖುಶಿಗೊಳಿಸುವ, ಪ್ರಚೋದಿಸುವ, ಬೆದರಿಸುವ, ಮನವೊಲಿಸುವ ಎಲ್ಲ ಸಂದೇಶಗಳೂ ಮೌನಬಂಡೆಗೆ ಅಪ್ಪಳಿಸಿ ತಿರುಗಿ ಬಡಿದಂತೆ ಇವನ ಎದೆಭಾರವನ್ನು ಹೆಚ್ಚಿಸಿದ್ದವು. ಕರೆಗಳು ನಿರುತ್ತರದಲ್ಲಿ ಕೊಲ್ಲುತ್ತಿದ್ದವು. ಕಾಯಂ ಆಗಿ ಶಿರಸಿಗೇ ಹೋಗುವ ಬಗ್ಗೆ ಹೇಳಿದ್ದಳು. ಹಸಿರುಕಾಡುಗಳ ನಡುವೆ ಹಾಯಾಗಿರುವಾಸೆ ಅಂದಿದ್ದಳು. ಅಘನಾಶಿನಿ ತೀರಕ್ಕೆ ಬಂದವನು ಹಸಿರು ಕಾಡಿಗೆ ಬಾರದಿರುವೆನೇ, ಕೂಸೆ ಅಂದಿದ್ದ. ಅವಳು ನಕ್ಕಿದ್ದಳು. ಭೌಗೋಲಿಕ ಸ್ಥಳಾಂತರವು ಭಾವನೆಗಳ ಅವಸ್ಥಾಂತರಕೆ ಕಾರಣವಾಗುವುದೆಂದು ಶಾಂತಾರಾಮನಿಗೇನು ಕನಸು ಬಿದ್ದಿತ್ತೇ? ಎಲ್ಲೇ ಸ್ಥಳಾಂತರಿಸಿದರೂ ಮತ್ತೆ ಹುಡುಕಲಾರದಷ್ಟು ಜಗತ್ತು ದೊಡ್ಡದಾಗೇನೂ ಉಳಿದಿಲ್ಲ, ನಿಜ. ಆದರೆ ಇಷ್ಟವೇ ಇಲ್ಲದೇ ಮಾನಸಿಕವಾಗಿ ದೂರಾದವರನ್ನು ಹುಡುಕಿ ಸಾಧಿಸುವುದಾದರೂ ಏನು ಎಂಬ ಗೊಂದಲವು ಶಾಂತಾರಾಮನನ್ನು ನಿಷ್ಕ್ರಿಯಗೊಳಿಸುತ್ತಿತ್ತು. ಪ್ರೀತಿಯ ತೀವ್ರತೆ ಮತ್ತು ಒಲ್ಲದ ಮನಸ್ಸನ್ನು ಓಲೈಸುವ ನಿರರ್ಥಕತೆಯ ಯೋಚನೆಗಳು ಅವನನ್ನು ಹೈರಾಣು ಮಾಡಿದ್ದವು. ಆದರೂ ಅವನ ಸುಡು ಮನಸ್ಸು ಅವಳಿರುವ ಅಪಾರ್ಟ್‌ಮೆಂಟಿನ ದಾರಿಗಳಲ್ಲಿ ಅಲೆದಾಡಿಸಿ ಅವಳು ಅಲ್ಲಿಂದ ಖಾಲಿಮಾಡಿರುವುದನ್ನು ಖಾತ್ರಿ ಮಾಡಿಕೊಂಡಿತ್ತು. ತಿಂಗಳುಗಟ್ಟಲೆ ಅವಳ ಸಂದೇಶಕ್ಕಾಗಿ ಕಾದು ಸುಸ್ತಾದ. ಅವಳ ವಾಟ್ಸ್‌ಆ್ಯಪ್, ಫೇಸ್‌ಬುಕ್‌ನ ಸ್ಟೇಟಸ್ಸು ಪದೇಪದೇ ದಿಟ್ಟಿಸುವುದು ವ್ಯಸನವಾಯ್ತು. ಅವಳ ಫೇಸ್‌ಬುಕ್ ಫ್ರೆಂಡ್ಸ್ ಲಿಸ್ಟಿನಲ್ಲಿದ್ದವರ ಅಕೌಂಟಿಗೆ ಹೋಗಿ ಲೈಕುಗಳ ಕಾಮೆಂಟುಗಳ ರಾಶಿಯಲ್ಲಿ ಇವಳ ಹೆಸರನ್ನು ಹುಚ್ಚನಂತೆ ತಡಕಾಡಿದ. ಅವಳ ಲೈಕುಗಳನ್ನೂ ಕಾಮೆಂಟುಗಳನ್ನೂ ಕಂಡರೆ ಪ್ರೀತಿಸಿದವನೊಡನೆ ಬಿಟ್ಟು ಬೇರೆಯವರೊಡನೆ ಚಕ್ಕಂದ ಹೊಡೆಯುವ ನಿರ್ಲಜ್ಜ ಹೆಣ್ಣು ಎಂದು ಬೈದಾಡುವುದೂ ಅದಕ್ಕೆ ನೊಂದುಕೊಳ್ಳುವುದೂ ನಿತ್ಯದ ಶಿಕ್ಷೆಯಾಯಿತು. ಹೀಗೆ ಹಸಿಜೀವ ಸುಡುವ ಅನ್ಯಾಯ ಏನು ಮಾಡಿದ್ದೆ ತಾನು? ಅಥವಾ ಅಂಟಿಕೊಳ್ಳದಿರುವ ಸಿದ್ಧಾಂತವನ್ನು ಕಲಿಸ್ತಿಯೇನೋ ನಾನ್ಸೆನ್ಸ್ ಅಂತ ಗೇಲಿ ಮಾಡುತ್ತಿರಬಹುದೆ? ಅಥವಾ ಕುಸುಮಳಂಥ ಕುಸುಮ ತನ್ನ ಬದುಕಿನಲ್ಲಿ ಬಂದದ್ದು ಒಂದು ಭ್ರಮೆಯೆ?... ಅಸ್ವಸ್ಥತೆಯಲ್ಲಿ ಶಾಂತಾರಾಮ ಮಾನಸರೋವರ ಬೆಂಚುವಾಸಿಯಾಗಿಬಿಟ್ಟ.

★★★

ಬೆಳಿಗ್ಗೆಯಿಂದಲೆ ಮಳೆ ಸುರಿಯುತ್ತಿದೆ. ಸಂಜೆಯಾಗುತ್ತಿದ್ದಂತೆ ಎಲ್ಲರೂ ಮನೆ ಸೇರುವ ಆತುರದಲ್ಲಿದ್ದಾರೆ. ಶಾಂತಾ ಬೆಂಚಿನ ಮೇಲೆ ಕೂತು ಮಳೆಯನ್ನೇ ನೋಡುತ್ತ ಕೂತ. ದೂರದ ಗುಡ್ಡಗಳು ಅದಕ್ಕೆ ಅಂಟಿಕೊಂಡಂತೇ ಇರುವ ಇಮಾರತುಗಳು ಅಡ್ಡಮಳೆಯಲ್ಲಿ ಅದೃಶ್ಯವಾಗಿವೆ. ಪ್ಲಾಟ್‌ಫಾರ್ಮಿನ ಮಳೆನೀರಲ್ಲಿ ತಾವು ಜೊತೆಯಾಗಿ ನಡೆದ ಪಾದಗಳು ತೇಲಿಹೋದಂತೆ ಭಾಸವಾಗುತ್ತಿದೆ ಅವನಿಗೆ. ಕುಸುಮಳಿಗಾಗಿಯೇ ಬರೆದಂತಹ ಎಂತೆಂಥ ಸಾಲುಗಳೂ ಕೊಚ್ಚಿ ಹೋಗುತ್ತಿರುವಂತೆ ಅನಿಸಿತು ಶಾಂತಾರಾಮನಿಗೆ. "ನಿಮ್ಮ ಹೊಗಳಿಕೆ ಜಾಸ್ತಿಯಾಯ್ತು... ಆದ್ರೂ ಪ್ರತಿಯೊಂದು ಶಬ್ದ ಓದಿ ಖುಷಿಯಾಗುತ್ತೆ, ನಿಮ್ಮ ಮಾತುಮಾತಲ್ಲೆ ಜೇನು ಇರುತ್ತೆ" ಅಂದಿದ್ದಳು. "ಖುಷಿ ಪಡಿ ಕುಸುಮ, ನನ್ನ ಮಾತುಗಳು ಸಾರ್ಥಕ ಆಗುವುದು ಆಗಲೇ. ನಂಗೆ ಅದಕ್ಕಿಂತ ಬೇರೆ ಖುಷಿ ಇಲ್ಲ ನಂಬಿ" ಎಂದಿದ್ದ. ನನ್ನ ಎಸ್ಸೆಮ್ಮೆಸ್ಸುಗಳಿಂದ ಹಗುರಾಗುತ್ತಿದ್ದ ಈ ಹೆಣ್ಣು ಈಗ ಅಪರಿಚಿತಳಂತೆ ಮೌನವಾಗಿರುವುದೇಕೆ? ಕೃತಘ್ನ ಹೆಣ್ಣು! ಬರೀ ಚಲ್ಲಾಟವಾಡಲು ಬಂದ ಹಡಬಿಟ್ಟಿ... ನಾಲಿಗೆ ತುದಿಗೆ ಬಂದ ಬೈಗುಳದ ಮಾತನ್ನು ನುಂಗಿಕೊಂಡ. ಥೆ! ಪ್ರೀತಿಸಿದವಳನ್ನೇ ಬೈಯುತ್ತಿಯೇನೋ ಬೋ... ಮಗನೇ ಎಂದು